ರಾಗಗಳು ಒಮ್ಮೆಗೇ ಭುಗಿಲೇಳುತ್ತಿದ್ದವು. ಮೀನಾಕ್ಷಿ ಕುಡಗೋಲು ಹಿಡಿದು ಅಂಗಳ ಹೊಕ್ಕಳೆಂದರೆ ಸಾಕು ಹಿಗ್ಗಿ ಹೀರೇಕಾಯಂತಾಗಿ ಎಡೆಬಿಡದೆ ಪ್ರೇಮಗೀತೆಗಳ ಸಾಲುಗಳು ಅವನ ಬಾಯಿಂದ ಅನಾಯಾಸವಾಗಿ ಹೊರಬೀಳುತ್ತಿದ್ದವು. 'ನೀ ನನಗೆ, ನಾ ನಿನಗೆ ಜೇನಾಗುವಾ, ರಸದೇವ ಗಂಗೆಯಲಿ ಮೀನಾಗುವಾ' ಅನ್ನುತ್ತಲೋ 'ಆರಂಕುಶಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ' ಅಂತಲೋ ಜೋರಾಗಿ ಹಾಡುತ್ತಾ ಮನಸ್ಸಿನಲ್ಲೇ ಕುಣಿದಾಡುತ್ತಿದ್ದ. ಆದರೆ ಬನವಾಸಿ ದೇಸಮಂ ಜಾಗದಲ್ಲಿ ಮನದೊಳಗೇ 'ಮೀನಾಕ್ಷಿಯಂ'ಎಂದು ಸೇರಿಸಿಕೊಳ್ಳುತ್ತಿದ್ದ. ಅವನ ರಸಿಕತೆ ದೊಡ್ಡದು. ದೇವಾನಂದನ 'ಸೌ ಸಾಲ್ ಪೆಹಲೇ ಮುಝೆ ತುಮ್ಸೆ ಪ್ಯಾರ್ ಥಾ, ಆಜ್ ಬಿ ಹೈ, ಔರ್ ಕಲ್ ಬಿ ರಹೇಗಾ' ಎಂದು ಮೀನಾಕ್ಷಿಯನ್ನು ನೋಡುತ್ತಾ ಹಾಡುವುದನ್ನು ಕೇಳಿ ಬಸಜ್ಜನಿಗೆ, ಉಳಿದ ಹೆಣ್ಣುಮಕ್ಕಳಿಗೆ ಅದೊಂದೂ ಅರ್ಥವಾಗದೆ ಗೊಳ್ಳನೆ ನಗುತ್ತಿದ್ದರು. ಬಸಜ್ಜ 'ಲೇ ಶೇಕ್ರಿ ಅದೇನೋ ನಿನ್ನ ಹುಚ್ಚಾಟ ಅದ್ಯಾವ ತರದ ಮಾತೋ, ಯಾವ ತರದ ಪದಾನೋ ನಮ್ಮವಲ್ವೇ ಅಲ್ಲಪಾ, ತಳ ಬುಡ ಸಿಕ್ಕಲ್ಲ ಅಂಥಾ ಮಾತು, ನೀನಾಡೋ ಪದ ಆ ಗುಡಿಯಾಗಳ ಹನುಮಪ್ಪಗೇ ಚಂದ, ಪಟ್ಣಕ್ಕೆ ಹೋಗಿದ್ದು ಓದ್ಕೆಳಕೋ ಏನು ಬರೇ ಆಡು ಕಲಿಯಾಕೋ' ಅಂದರೆ 'ಅಜ್ಜಾ ನಾನೇಳಿದ್ದು ನಾನೋದಿ ಪಾಸಾದ ಪುಸ್ತಕದ ಹಾಡು, ಅದರ ಅರ್ಥ ಹೇಳಬೇಕೇನಜ್ಜ' ಅಂತಂದರೆ 'ಬ್ಯಾಡಾ ಬಿಡಪ್ಪಾ, ಇಲ್ಲಿಗೇ ನಮಿಗೆ ಸುಸ್ತು ಕಣಪ್ಪ, ನೀನೇ ಇಟ್ಕಳಪ್ಪ ಅರ್ಥ ಪರ್ತ ಎಲ್ಲಾ, ನಮಿಗಿಲ್ಲಿ ಕೆಲಸ ಐತೆ. ಅಂತ ಅನ್ನುತ್ತ ಬಸಜ್ಜ ಹೆಣ್ಣುಮಕ್ಕಳನ್ನು ಗದರಿಸುವಂತೆ ಮಾಡುತ್ತಿತ್ತು.

ಶೇಕ್ರಿಯ ಮನಸ್ಸು ಸಂಪೂರ್ಣ ಮೀನಾಕ್ಷಿಗೆ ಅರ್ಪಿಸಿಕೊಂಡುಬಿಟ್ಟಿತ್ತು. ಆದರೆ, ಜಯಂತನು ಅವಳನ್ನು ನೋಡುತ್ತಿದ್ದ ರೀತಿ ಅವನಿಗೆ ದಿಗಿಲು ಹುಟ್ಟಿಸುತ್ತಿತ್ತು. ಮೀನಾಕ್ಷಿಗೆ ಶೇಕ್ರಿಯ ಈ ಆಟ ಇಷ್ಟವಾಗುತ್ತಿತ್ತು. ಒಳಗೇ ಜಯಂತನಿಗೂ ಇವನಿಗೂ ಇರುವ ಅಂತರ ತಿಳಿಯುತ್ತಿತ್ತು. ಆದರೆ ಆಕೆಗೆ ಪ್ರೀತಿ, ಪ್ರಣಯ ಇವೆಲ್ಲ ಅರ್ಥವಾಗದ ಭಾಷೆ. ಶೇಕ್ರಿಯ ಅಂಗಡಿಯಲ್ಲಿನ ಅವನ ನಡೆ, ಅವನ ಮೆದು ಮಾತು. ನೋಡುವ ನೋಟ ಎಲ್ಲವೂ ಮೀನಾಕ್ಷಿಗೆ ಚಂದ. ಅದೇ ಭಾವದಲ್ಲಿ ಅವಳನ್ನು ಹತ್ತಿರ ಸೇರಿಸಿಕೊಳ್ಳಲು ಶೇಕ್ರಿಯ ಮನಸ್ಸು ಒತ್ತಾಯಿಸುತ್ತಿತ್ತು. ಅವಳೆದುರು ತನ್ನ ಪ್ರೇಮ ನಿವೇದನೆ ಮಾಡಿಕೊಳ್ಳಲು ಅವನಿಗೆ ಮುಜುಗರ. ಮೀನಾಕ್ಷಿಗೆ ಈ ಪ್ರೇಮ ಭಾಷೆ ಅರ್ಥವಾಗುವುದಿಲ್ಲ ಎಂದೂ ಅವನಿಗೆ ಗೊತ್ತು. ಆಗಾಗ ಕೊಂಕು ಮಾತಿನಲ್ಲೇ ಅವಳಿಗೆ ತನ್ನ ಮಹದಾಸೆಯನ್ನು ನಿವೇದಿಸಿದರೆ ಆಕೆ ಅದ ತಿಳಿಯದೇ ಅವನಿಗೇ ತಿರುಗೇಟು ನೀಡಿಬಿಡುತ್ತಿದ್ದಳು. ಅವಳಿಗೆ ತಿಳಿಹೇಳುವ ಸಮಯವೂ ಆ ಹಳ್ಳಿಯಲ್ಲಿ ಸಿಕ್ಕುತ್ತಿರಲಿಲ್ಲ. ಅಂತೂ ಶೇಕ್ರಿ ತನ್ನೊಳಗೇ ಏನೋ ಒಂದು ನಿರ್ಧಾರಕ್ಕೆ ಬಂದಂತಿತ್ತು.

ಊರಿನ ಅರಳಿ ಕಟ್ಟೆ ಅಂದರೆ ಪಡ್ಡೆಗಳ ಕಾಯಂ ತಂಗುದಾಣ. ಜಯಂತ ಶೇಕ್ರಿಯ ಪಟಾಲಮ್ಮೂ ಅಂದ್ರೆ ಮೂಲೆ ಮನೆ ಬಸ್ವಂತ, ನಾಯಕರಟ್ಟಿ ಸಿದ್ದೇಶಿ, ಕೆಳಗಿನ ಮನೆ ಪರಮ, ಹಟ್ಟಿಯ ಹನುಮಂತ ಮುಂತಾದ ಬಾಡಿಗಳು. ಸಂಜೆಗೆ ಸೇರಿದವರು ಮುದ್ದೆ ಮುರಿಯುವ ಹೊತ್ತಿಗೇ ಜಾಗ ಬಿಟ್ಟೇಳುತ್ತಿದ್ದುದು. ಅಲ್ಲಿ ಸೇರಿದರೆಂದರೆ ಮುಗೀತು, ಯಾರಮನೆ ದೋಸೆಯಲ್ಲಿ ಎಷ್ಟೆಷ್ಟು ತೂತು ಅಂತ ಮಾತಿಲ್ಲದೆ ಎಂದಿಗೂ ಸಭೆ ಬರಕಾಸ್ತಾಗುತ್ತಿರಲಿಲ್ಲ. ಪರಮೇಶಿ ಅದರಲ್ಲಿ ಪಾಕಡಾ, ಹಟ್ಟಿ ಹನುಮಂತನೂ ನುರಿತವನೇ. ಅವರಿಬ್ಬರಿಗೂ ಜಯಂತ, ಶೇಕ್ರಿಯ ಸಮಾಚಾರ ಚನ್ನಾಗೇ ತಿಳಿದಿತ್ತು. ಅದಕ್ಕೇ ಹನುಮಂತ ಮಾತೆತ್ತಿದ. 'ಏನಪ್ಪಾ ಶೇಖರ್ ಮಾರಾಜ ಎಲ್ಲಿಗೆ ಬಂದು ನಿಂತುತಪ್ಪ ನಿನ್ನ ಮೀನಾಕ್ಷಿ ಸವಾರಿ' ಅದ ಕೇಳಿದ್ದೇ ಜಯಂತ ಕಣ್ಣು ಬಾಯಿಬಿಟ್ಟ. ಬಸ್ವಂತನಿಗೆ ತಳಬುಡ ಕಾಣದೆ ಒದ್ದಾಡಿದ. 'ಲೋ ಅಂತಾದ್ದೇನೂ ಇಲ್ಲ ಕಣ್ರಲೇ, ಸುಮ್ ಸುಮ್ನೆ ಪಾಪ ಆ ಹುಡುಗಿ ಮರ್ಯಾದೆ ತೆಗೀಬ್ಯಾಡ್ರೋ' ಅನ್ನುತ್ತಲೇ ಪರಮೇಶಿ 'ಈ ಜಯಂತನೂ ಕಣ್ಣಾಕಿದನೆ ಕಣ್ರೋ, ಅದೇನು ಶೇಕ್ರಿಗೋ, ಜಯಂತಂಗೋ' ಅನ್ನಲು ಜಯಂತನು 'ಛೇ ಛೇ ಅಂಥಾದ್ದೇನಿಲ್ಲಪ್ಪ, ಇವನಿಗೆಲ್ಲೋ ಹುಚ್ಚು ಕಣ್ರೋ, ಅವಳು ಅಂಥವಳಲ್ಲ ಕಣ್ರೋ' ಮುಸಿಮುಸಿ ನಗ್ತಿದ್ದ ಬಸ್ವಂತ 'ಲೇ ಇವರಾಟ ಏನಂತೀರಲೇ, ಈ ಶೇಕ್ರಿ ಅಂಗಡಿಗೆ ಬಂದಾಗ ಕೊಡಾದೇನು, ನಗಾದೇನು, ಇವನು ಜಯಂತದಾನಲ್ಲೋ ಅಡಕೆ